ಕರ್ನಾಟಕ ಸರ್ಕಾರ

ಅಡ್ವೋಕೇಟ್ ಜನರಲ್‌ರವರ ಕಛೇರಿ,
ಉಚ್ಚ ನ್ಯಾಯಾಲಯದ ಕಟ್ಟಡ, ಬೆಂಗಳೂರು.

ಕಡತ ಸಂಖ್ಯೆ/631/AG-HO/STY

ಹರಾಜು ಪ್ರಕಟಣೆ ಸಂಖ್ಯೆ: 41/AG-HO/STY/2023-24,
ದಿನಾಂಕ: 25.05.2023

ವಿಷಯ: ಅಡ್ವೋಕೇಟ್ ಜನರಲ್‌ರವರ ಕಛೇರಿಯಲ್ಲಿರುವ ಫಿಯಟ್ ಲೀನಿಯ ಕಾರಿನ ಸಂಖ್ಯೆ: ಕೆ.ಎ.01 ಜಿ 5333 ಕಾರನ್ನು ಬಹಿರಂಗ ಹರಾಜು ಮಾಡುವ ಬಗ್ಗೆ.

* * * * *

ಅಡ್ವೋಕೇಟ್ ಜನರಲ್ ರವರ ಕಛೇರಿಯಲ್ಲಿ ಕಛೇರಿ ಕಾರ್ಯಕ್ಕಾಗಿ ಉಪಯೋಗಿಸುತ್ತಿದ್ದ 2010 ನೇ ವರ್ಷದ ಒಂದು ಫಿಯಟ್ ಲೀನಿಯ ಕಾರಿನ ಸಂಖ್ಯೆ: ಕೆ.ಎ.01.ಜಿ.5333 ನ್ನು ದಿನಾಂಕ: 03.06.2023 ರಂದು ಮಧ್ಯಾಹ್ನ 03.00 ಗಂಟೆಗೆ ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲಾಗುವುದೆಂದು ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಸಲಾಗಿದೆ.

ಹರಾಜಿನಲ್ಲಿ ಭಾಗವಹಿಸುವವರು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

1. ಪ್ರತಿಯೊಬ್ಬ ಆಸಕ್ತ ಹರಾಜುದಾರರು ಹರಾಜಿನಲ್ಲಿ ಭಾಗವಹಿಸುವುದಕ್ಕೆ ಮೊದಲು ಅಂದರೆ ದಿನಾಂಕ: 03.06.2023 ರ ಮಧ್ಯಾಹ್ನ 12-00 ಗಂಟೆಯೊಳಗಾಗಿ ಮುಂಗಡ ಹಣವನ್ನು ಠೇವಣಿಯಾಗಿ ರೂ.5,000-00 (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಕಛೇರಿಯ ಲೆಕ್ಕಶಾಖೆಗೆ ನಗದಾಗಿ ಪಾವತಿ ಮಾಡತಕ್ಕದ್ದು.
2. ಕನಿಷ್ಠ ಹರಾಜು ಮೊತ್ತ ರೂ.1,30,000-00 ಗಳನ್ನು ಅಥವಾ ಅದಕ್ಕಿಂತ ಹೆಚ್ಚು ನಿಗಧಿಪಡಿಸಿದ್ದು, ಹರಾಜು ದರವನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವು ಈ ಕೆಳಗೆ ಸಹಿ ಮಾಡಿರುವವರೆಗೆ ಇರುತ್ತದೆ.
3. ವಿಜೇತರು ಹರಾಜು ದರವನ್ನು ಒಪ್ಪಿಕೊಂಡ ನಂತರ ಹರಾಜಿನಲ್ಲಿ ಭಾಗವಹಿಸಿದ ವಿಜೇತ ಹರಾಜುದಾರರ ಠೇವಣಿ ಹೊರತುಪಡಿಸಿ ಇತರರ ಮುಂಗಡ ಹಣವನ್ನು ಹಿಂತಿರುಗಿಸಲಾಗುವುದು.
4. ವಿಜೇತ ಹರಾಜುದಾರರು ಹರಾಜು ಮುಗಿದ 24 ಗಂಟೆಗಳಲ್ಲಿ ಬಹಿರಂಗ ಹರಾಜಿನಲ್ಲಿ ನಿಗದಿಪಡಿಸಿದ ವಾಹನದ ಪೂರ್ತಿ ಹಣವನ್ನು Demand Draft ರೂಪದಲ್ಲಿ "ADVOCATE GENERAL, KARNATAKA" ರವರ ಹೆಸರಿನಲ್ಲಿ ಪಾವತಿಸತಕ್ಕದ್ದು.
5. ವಿಜೇತ ಹರಾಜುದಾರರು ಹರಾಜು ಮುಗಿದ ನಂತರ ಅವರ ಸ್ವಂತ ಸಾಗಾಣಿಕಾ ವೆಚ್ಚದಲ್ಲಿ ಸದರಿ ವಾಹನವನ್ನು ವಿಲೇವಾರಿ ಮಾಡತಕ್ಕದ್ದು

**ಸೂಚನೆ:**

ವಾಹನವನ್ನು ಕಛೇರಿಯ ಆವರಣದಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ನಿಲ್ಲಿಸಲಾಗಿರುವುದು.

(ಅಭಿಜಿನ್ ಬಿ.)
ಆಡಳಿತಾಧಿಕಾರಿ

(ಅಭಿಜಿನ್ ಬಿ.)
ಆಡಳಿತಾಧಿಕಾರಿ
ಅಡ್ವೋಕೇಟ್ ಜನರಲ್‌ರವರ ಕಛೇರಿ
ಬೆಂಗಳೂರು - 01

VV/STATIONARY FOL:
OFFICE ORDER DOC.